ಬರುತ್ತಿರುವ ದೃಶ್ಯಾವಳಿಗಳಿದ್ದವು. ದುರದೃಷ್ಟವೆಂದರೆ ಇಲ್ಲೂ ಮುಖಚಹರೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅಂಗಡಿ ಮಾಲೀಕರು ಸಿಸಿಟೀವಿಗಳನ್ನು ಹಾಕಿಸಿಕೊಳ್ಳುವಲ್ಲಿ ಮಾತ್ರ ಬುದ್ಧಿವಂತಿಕೆ ತೋರುತ್ತಾರೆಯೇ ಹೊರತು ಅವುಗಳ ಗುಣಮಟ್ಟ, ರೆಸಲ್ಯೂಷನ್ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಕೆಲವರಂತೂ ತಮ್ಮ ಅಂಗಡಿಯ ಸಿಸಿಟೀವಿ ಕೆಲಸ ಮಾಡ್ತಾ ಇದೆಯೋ ಇಲ್ವೋ ಎಂಬುದನ್ನೂ ಚೆಕ್ ಮಾಡೊಲ್ಲ. ಇನ್ನು ಕೆಲವರು ಬಿಡಿ, ಡಿವಿಆರ್‌ನ ಪಾಸ್‌ವರ್ಡ್ ಕೂಡ ಗೊತ್ತಿರುವುದಿಲ್ಲ. ಏನಾದರೂ ಕೇಳಹೋದರೆ ಅದೆಲ್ಲಾ ತಿಳಿಯಾಕಿಲ್ಲ ಸಾರ್, ಒಂದೇ ನಿಮಿಷ ತಡೀರಿ, ಸಿಸಿಟೀವಿಯವರ್ನ ಕರೆದುಬಿಡ್ತೀನಿ ಅಂತ ಬಡಿವಾರ ಮಾಡುತ್ತಾರೆ.

ಒಂದಂತೂ ಸ್ಪಷ್ಟವಾಯಿತು. ಮಹಿಳೆ ಮತ್ತು ಆ ಹುಡುಗ ಪರಿಚಿತರು. ಹಾವಭಾವಗಳನ್ನು ಗಮನಿಸಿದರೆ ಅಮ್ಮ ಮಗನೆಂದು ಹೇಳಬಹುದಿತ್ತು. ಇಬ್ಬರೂ ಜೊತೆಯಾಗಿ ಬಂದಿದ್ದಾರೆ. ಒಂದೂವರೆಗಂಟೆ ಅಲ್ಲಿ ಇಲ್ಲಿ ಸುತ್ತಾಡಿದ್ದಾರೆ. ಅಥವಾ ಯಾರದೋ ಮನೇಲಿ ಉಳಿದಿದ್ದಾರೆ. ನಂತರ ಹುಡುಗ ಚಾಕ್ಲೇಟು ತಿನ್ನುತ್ತಾ ನಿಂತಿದ್ದ ಮಗುವನ್ನ ಕಂಕುಳಿಗೇರಿಸಿ ನಡೆದಿದ್ದಾನೆ. ಸ್ವಲ್ಪ ದೂರ ಹೋದ ನಂತರ ಮಹಿಳೆ ಅವನನ್ನು ಸೇರಿಕೊಂಡಿದ್ದಾಳೆ. ಬಸ್‌ಸ್ಟಾಪ್‌ವರೆಗೂ ನಡೆದುಹೋಗಿ ಅಲ್ಲಿಂದ...

ಹಾಗಿದ್ದರೆ ಮಹಿಳೆ ಯಾಕೆ ಪತ್ತೆಯಾಗುತ್ತಿಲ್ಲ? ನಿಜಕ್ಕೂ ಏರಿಯಾಕ್ಕೆ ಹೊಸಬಳೇ? ಸ್ವಲ್ಪವೂ ಗಾಬರಿಯಿಲ್ಲದೆ, ಸಾವಧಾನವಾಗಿ ಬಂದು ಅಷ್ಟೇ ನಿರಾತಂಕವಾಗಿ ಹೋಗುವ ಆಕೆ ಬಗ್ಗೆ ಇಷ್ಟೊತ್ತಿಗೆ ಏನಾದ್ರೂ ಕ್ಲೂ ಸಿಗಬೇಕಿತ್ತು. ಎಲ್ಲೋ ತಪ್ಪಾಗ್ತಾ ಇದೆಯಾ? ಅಥವಾ ನಮ್ಮ ಗಮನಕ್ಕೆ ಬಾರದೇ ಹೋದ ಇನ್ನೂ ಕೆಲವು ಸಂಗತಿಗಳಿವೆಯಾ?... ಅಸ್ಗರನನ್ನು ಬರಹೇಳಿದೆ.

'ಅಸ್ಗರ್... ಯಾವುದಾದ್ರೂ ಹೆಂಗಸಿನ ಜತೆ ಸಂಬಂಧಗಿಂಬಂಧ ಇಟ್ಕಂಡಿದೀಯೇನಯ್ಯಾ? ಇದ್ರೆ ಹೇಳ್ಬಿಡು, ನಾಳೆ ಅವಳು ಸಿಕ್ಕಾಕೊಂಡು, ಹೇಳಿ ಎಲ್ಲರ ಮುಂದೆ ನಿನ್ ಮರ್ಯಾದೆ ಹರಾಜಾಗೋದು ಬೇಡ...' ನೇರವಾಗಿ ಕೇಳಿದೆ.

'ಕ್ಯಾ ಸಾಬ್... ನನ್ನೇ ಅನುಮಾನಿಸ್ತೀರಾ... ನನ್ ದುಡಿಮೇಲಿ ಇರೋ ಒಬ್ಳು ಹೆಂಡ್ತೀನ ಸಾಕೋಕಾಯ್ತಿಲ್ಲ.. ಅಂತದ್ರಾಗೆ ಇನ್ನೊಬ್ಳಾ? ಅವೆಲ್ಲಾ ಷೋಕಿ ನನಗಿಲ್ಲ. ಬೇಕಾದ್ರೆ ಏರಿಯಾದಾಗೆ ಕೇಳ್ನೋಡಿ...' ಅಂದ. ಅವನ ಚಾರಿತ್ರ್ಯ ಕಟ್ಟಿಕೊಂಡು ಏನಾಗಬೇಕಿರಲಿಲ್ಲ. ನನ್ನ ಅನುಮಾನ ಬಗೆಹರಿಯಬೇಕಿತ್ತು ಅಷ್ಟೆ.

'ಕರಪತ್ರಗಳನ್ನೆಲ್ಲಾ ಹಂಚಿ ಆಯಿತಾ?' ಕೇಳಿದೆ. 'ಆದಷ್ಟೂ ಎಲ್ಲಾ ಕಡೆ ತಲುಪ್ಸಿದೀನಿ. ನೆಂಟರುಗೋಳು, ಫ್ರೆಂಡ್ಸು ಎಲ್ರಿಗೂ ಮುಟ್ಸಿದೀನಿ. ಆ ಹೆಂಗ್ಸು ಯಾರೋ?... ನನ್ನ ಕೈಗೆ ಸಿಕ್ರಂತೂ ಜಡೆ ಹಿಡಿದು ಎಳ್ಕಂಡುಬಂದು ನಿಮ್ ಹತ್ರ ಬಿಡ್ತೀನಿ. ಇದು ಮಾತ್ರ ನಿಜ...' ಅಸ್ಗರ್ ಮುಷ್ಟಿ ಬಿಗಿದು ಅವಡುಗಚ್ಚಿದ. ಇದು ಬಹುಶಃ ಹತಾಶೆಯ ಮತ್ತೊಂದು ರೂಪವೇ?...

## ಎಂಥಾ ತಿರುವು !

ಮರುದಿನದ ಬೆಳವಣಿಗೆ ತೀರಾ ಅನಿರೀಕ್ಷಿತವಾಗಿತ್ತು. ಇಂತಹದೊಂದು ತಿರುವು ಸಿಕ್ಕಬಹುದೆಂದು ಯಾರೂ ಎಣಿಸಿರಲಿಲ್ಲ.

ಆ ದಿನ ಸಂಜೆ ಅಸ್ಗರ್ ಫೋನು ಮಾಡಿ, 'ಸಾಬ್... ಮಗಾ ಸಿಕ್ಕೈತೆ. ಹೊಸೂರು ರಸ್ತೆ ಪೊಲೀಸು ಸ್ಟೇಷನ್ನಾಗಿತ್ತು. ಸ್ಟೇಷನ್ ಹತ್ರ ಇರೋ ದರ್ಗಾದಾಗೆ ಯಾರೋ ಅಮ್ಮೂನ ಬಿಟ್ ಹೋಗಿದ್ರಂತೆ... ಉಸ್ಮಾನ್ ಅನ್ನೋ ಡ್ರೈವರು ತಂದು ಠಾಣೆಗೆ ಬಿಟ್ಟನಂತೆ. ನಂಗೆ ಫೋನೂ